ವಾರಪೇಟೆಗೆ transport ಮಾಡಿದ್ದಾರೆಯೇ? ಅದು ಎಲ್ಲಿದೆ ಎನ್ನುವ ಮಾಹಿತಿಯನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಯು. ಟಿ. ಖಾದರ್: ನಾವು ಬಿಡುಗಡೆ ಮಾಡಿದಂತ 5 ಲಕ್ಷ ಹಣದಲ್ಲಿ ಅಲ್ಲಿ ಒಂದು ಕಟ್ಟಡವನ್ನು ಕಟ್ಟಿದ ತಕ್ಷಣ ಆ ಕೇಂದ್ರಕ್ಕೆ ಸಾಧನ ಸಲಕರಣೆಗಳನ್ನು ಮುಟ್ಟಿಸುತ್ತೇವೆ.

ವಸತಿ ಶಾಲೆಗಳ ಮಂಜೂರಾತಿ

126 (1565); ಶ್ರೀ ಪಾಟೀಲ್ ಎ. ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ)

(ಅ) ಕಳೆದ 2011–12, 2012–13, 2013–14 ರಿಂದ ಇಲ್ಲಿಯವರೆಗೆ ಬಿಜಾಪುರ ಜಿಲ್ಲೆಯಲ್ಲಿ ಸರ್ಕಾರದಿಂದ ಎಷ್ಟು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಮಂಜೂರಾಗಿವೆ; (ವಿಧಾನಸಭಾ ಕ್ಷೇತ್ರವಾರು ಮಂಜೂರಾದ ಸ್ಥಳದೊಂದಿಗೆ ವಿವರ ಒದಗಿಸುವುದು)

(ಆ) 2014–15ನೇ ಸಾಲಿಗೆ ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಿಂದ ಸಿಂಧಗಿ ವಣಕ್ಯಾಳ ಕ್ರಾಸ್ ಮತ್ತು ಮುದ್ದೇಬಿಹಾಳ ತಾಲ್ಲೂಕು ಗೊಟಖಿಂಡ್ಕಿ ಗ್ರಾಮಗಳಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಜೂರು ಮಾಡಲು ಸರ್ಕರಕ್ಕೆ ಪ್ರಸ್ತಾವನೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಸದರಿ ಪ್ರಸ್ತಾವನೆಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) 2014–15ನೇ ಸಾಲಿಗೆ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಂಜೂರಾತಿ ನೀಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)

(ಅ) 2011–12 ಮತ್ತು 2013–14ನೇ ಸಾಲಿನಲ್ಲಿ ಯಾವುದೇ ಹೊಸ ವಸತಿ ಶಾಲೆಗಳು ಬಿಜಾಪುರ ಜಿಲ್ಲೆಗೆ ಮಂಜೂರು ಮಾಡಿರುವುದಿಲ್ಲ.

2012–13ನೇ ಸಾಲಿನ ಬಿಜಾಪುರ ಜಿಲ್ಲೆಗೆ ಈ ಕೆಳಕಂಡ 3 ವಸತಿ ಶಾಲೆಗಳು ಮಂಜೂರಾಗಿದೆ.

ಕ್ರ. ಸಂ.	ವಸತಿ ಶಾಲೆಗಳ ವಿವರ	ವಿಧಾನ ಸಭಾ ಕ್ಷೇತ್ರದ ವಿವರ
1	ಪ. ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಇಂಡಿ	ಇಂಡಿ
2	ಹಿಂ. ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಸವನ ಬಾಗೇವಾಡಿ	ಬಸವನ ಬಾಗೇವಾಡಿ
3	ಹಿಂ. ವರ್ಗದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಬಬಲೇಶ್ವರ	ಬಬಲೇಶ್ವರ

ಮಂಜೂರಾದ 3 ಹೊಸ ವಸತಿ ಶಾಲೆಗಳು ಜಮೀನು ಮಂಜೂರಾತಿ ಆಗದೇ ಇರುವುದರಿಂದ ಹಾಗೂ ಸೂಕ್ತ ಬಾಡಿಗೆ ಕಟ್ಟಡಗಳು ಅಂದರೆ, ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ನಿಲಯ, ಶೌಚಾಲಯ, ಸ್ನಾನದ ಗೃಹಗಳು, ಶಾಲಾಕಟ್ಟಡ, ಅಡುಗೆ ಮನೆ ಮತ್ತು ಭೋಜನಾಶಾಲಾ, ಕಟ್ಟಡಗಳು, ಲಭ್ಯವಾಗದಿದ್ದರಿಂದ ಪ್ರಾರಂಭಿಸಿರುವುದಿಲ್ಲ.

(ಆ) ಶಾಸಕರು ಮಂಜೂರು ಮಾಡಲು ಕೋರಿರುತ್ತಾರೆ.

(ಇ) **ಮತ್ತು** (ಈ) 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹೋಬಳಿಗೆ ಒಂದು ವಸತಿ ಶಾಲೆ ತೆರೆಯುವುದು ಸರ್ಕಾರದ ನೀತಿಯಾಗಿದ್ದು, ವಿದ್ಯಾರ್ಥಿಗಳ ಬೇಡಿಕೆಯನ್ನು ಆಧರಿಸಿ ಶಾಲೆಗೆ ಅವಶ್ಯ ವಿರುವ ಜಮೀನು ಲಭ್ಯತೆಯನ್ನು ಅನುಸರಿಸಿ, ಹೊಸ ವಸತಿ ಶಾಲೆ ಗಳನ್ನು ತೆರೆಯಲಾಗುವುದು.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ ಮತ್ತು ನಾನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ವಸತಿ ನಿಲಯ ಸಹ ಇಲ್ಲ. ನಮ್ಮ ಸರ್ಕಾರ ಬಂದು ಒಂದು ವರ್ಷದಲ್ಲಿ ನಾನು ಅನೇಕ ಸಾರಿ ಮನವಿ ಕೊಟ್ಟಿದ್ದೇನೆ ಮತ್ತು ಆ ಪ್ರಶ್ನೆಯನ್ನು ಸಹ ಅವರಿಗೆ ಕೇಳಿದ್ದೆ. ಅದರಲ್ಲಿ ಏನು ಕೇಳಿದ್ದೆ ಎಂದರೆ, ದೇವರ ಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಿಂದ ಸಿಂಧಗಿ ವಣಕ್ಯಾಳ ಕ್ರಾಸ್ ಮತ್ತು ಮುದ್ದೇಬಿಹಾಳ ತಾಲ್ಲೂಕು, ಗೊಟಖಿಂಡ್ಕಿ ಗ್ರಾಮಗಳಿಗೆ ವಸತಿ ಶಾಲೆ ಮಂಜೂರು ಮಾಡಡು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ ಎಂದು ಹೇಳಿದ್ದರೆ ಬಂದಿದೆ ಎಂದು ಹೇಳಿದ್ದಾರೆ. ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? ಎಂದು ಕೇಳಿದ್ದರೆ ಅದಕ್ಕೆ ಸ್ಪಷ್ಟ ಉತ್ತರ ಕೊಟ್ಟಿಲ್ಲ. ಏಕೆಂದರೆ, ಬಜೆಟ್‌ನಲ್ಲಿ announce ಮಾಡಿದ್ದನ್ನು ಮಾತ್ರ ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ನನ್ನದು ಹೊಸ ಕ್ಷೇತ್ರ, ತಾಲ್ಲೂಕು Head-Quarters ಇಲ್ಲ, ನಮ್ಮ ಪರಿಸ್ಥಿತಿ ಹೇಗೆಂದರೆ. . . .

ಅಧ್ಯಕ್ಷರು: ಆಯಿತು, ನೀವು ಹೇಳಿದ ಪ್ರಕಾರ ಕೊಡುತ್ತೀರೋ ಇಲ್ಲವೋ ಎಂದು ಹೇಳಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಅವರು ಏನು ಹೇಳುತ್ತಾರೆಂದರೆ, ಬಜೆಟ್‌ನಲ್ಲಿ ಮಂಜೂರಾತಿ ಏನಾಗಿದೆ ಅದರ ಆಧಾರದ ಮೇಲೆ ಹೋಬಳಿಗೆ ಒಂದರಂತೆ ಪ್ರಸ್ತಾವನೆ ಪ್ರಕಾರ ಮಾಡುತ್ತೇವೆಂದು ಹೇಳುತ್ತಾರೆ. ಆದರೆ, ನಾನು ಸ್ಪಷ್ಟವಾಗಿ ಮಾನ್ಯ ಮಂತ್ರಿಯವರಿಗೆ, ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದೇನೆ. ನೀವು ಮಂಜೂರು ಮಾಡುತ್ತೀರೋ ಇಲ್ಲವೋ ಅದನ್ನು ಸ್ಪಷ್ಟ ಪಡಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ– ಈ ವರ್ಷ ನೂರು ವಸತಿ ಶಾಲೆಗಳನ್ನು ನಾವು ಮಂಜೂರು ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ

ಷರತ್ತು ಏನೆಂದರೆ, ಈಗ ಶಾಸಕರ ಬೇಡಿಕೆ ಇದೆ. ಅವರಿಗೆ ಒಂದು ಶಾಲೆಯನ್ನು ಮಂಜೂರು ಮಾಡಿಕೊಡುತ್ತೇವೆ. ಕೂಡಲೇ ಅವರು ಜಮೀನು ಒದಗಿಸಿಕೊಟ್ಟರೆ ತಕ್ಷಣ ಒಂದು ಶಾಲೆಯನ್ನು ಮಂಜೂರು ಮಾಡಿಕೊಡುತ್ತೇನೆ. ಮುಂದಿನ ವರ್ಷ ಪ್ರಾರಂಭ ಮಾಡಿಕೊಳ್ಳಬಹುದು.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ) ಅದಕ್ಕೆ ಜಮೀನು ಬೇಕಾದರೆ ನಾವು ಕೊಡಿಸಬಹುದು.

ಅಧ್ಯಕ್ಷರು: ಬೇಕಾದರೆ ಅಲ್ಲ, ಜಮೀನು ಕೊಡಿಸಿಕೊಡಿ ಅಷ್ಟೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಜಮೀನು ಕೂಡ ನಾನೇ ಕೊಡುತ್ತೇನೆಂದು ಅವರಿಗೆ ಹೇಳಿದ್ದೇನೆ.

ಅಧ್ಯಕ್ಷರು: ಸರಿ ಕೊಡಿ.

ಶ್ರೀ ಹೆಚ್. ಆಂಜನೇಯ: ಮಂಜೂರು ಮಾಡುತ್ತೇವೆ.

ಅಧ್ಯಕ್ಷರು: ಪಾಟೀಲರೆ, ಹೇಳಿದ್ದಾರೆ, ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಸಿಂಧಗಿ ತಾಲ್ಲೂಕು ಮತ್ತು ಮುದ್ದೇಬಿಹಾಳ ತಾಲ್ಲೂಕು ಹೀಗೆ ಎರಡು ತಾಲ್ಲೂಕಿನಲ್ಲಿ ಕೊಡಬೇಕೆಂದು ಕೇಳಿದ್ದೇನೆ. ಆ ಎರಡೂ ಹೋಬಳಿಯಲ್ಲಿ ಇವತ್ತಿನವರೆಗೂ ಅಲ್ಲಿಗೆ sanction ಆಗಿಲ್ಲ. ಆ ಎರಡೂ ಕಡೆಗೂ sanction ಮಾಡಿಕೊಡಬೇಕೆಂದು ನಮ್ಮ ಒತ್ತಾಯ.

ಅಧ್ಯಕ್ಷರು: ಮೊದಲು ಒಂದು ಕೊಟ್ಟಿರುವುದನ್ನು ತೆಗೆದುಕೊಳ್ಳಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಎರಡೂ ಕಡೆಯೂ sanction ಮಾಡಿಕೊಡುತ್ತೇನೆಂದು ಅವರು ಸ್ಪಷ್ಟವಾಗಿ ಹೇಳಲಿ ಅಷ್ಟೆ.

ಶ್ರೀ ಹೆಚ್. ಆಂಜನೇಯ: ಈಗಾಗಲೇ ನಾನು ಅವರಿಗೆ ಹೇಳಿದ್ದೇನೆ. ಒಂದನ್ನಂತೂ ನಾನು clear cut ಆಗಿ ಮಂಜೂರು ಮಾಡಿಕೊಡುತ್ತೇನೆ.

ಇನ್ನೊಂದನ್ನು ಪರಿಶೀಲನೆ ಮಾಡುತ್ತೇನೆ. ಅದೂ ಕೂಡ ಅಗತ್ಯವಿದೆ ಎಂದು ಕಂಡುಬಂದರೆ ಖಂಡಿತ ಮಾಡಿಕೊಡುತ್ತೇನೆ.

ಪ್ರ. ಸಂ. 127 (1454)

(ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರು ಸದನದಲ್ಲಿ ಹಾಜರಿರಲಿಲ್ಲ)

ಮಂಜೂರಾಗಿರುವ ಸಾಲ

128 (1424 ಮತ್ತು 1449); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ & ವಿನಯ ಕುಲಕರ್ಣಿ (ರಾಯಭಾಗ & ಧಾರವಾಡ)

(ಅ) ಇಲಾಖೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಯೋಜನೆಗಳಿಗೆ ಹಾಗೂ ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮಗಳಲ್ಲಿ ಫಲಾನುಭವಿಗಳಿಗೆ ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಮಂಜೂರಾದ ಸಾಲ ನೀಡಲು ಬ್ಯಾಂಕುಗಳು ಹಿಂದೇಟು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಾಲ ಮಂಜೂರಾದ ಫಲಾನುಭವಿಗಳಿಗೆ ಬ್ಯಾಂಕಿನ ವತಿಯಿಂದಲ್ಲದೆ ಇಲಾಖೆ ವತಿಯಿಂದ ಚೆಕ್ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) ಪರಿಶಿಷ್ಟ ಜಾತಿಗೆ ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ, ಪರಿಶಿಷ್ಟ ಪಂಗಡಕ್ಕೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಹಾಗೂ ಹಿಂದುಳಿದ ವರ್ಗಕ್ಕೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಂದ ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ ಮತ್ತು ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ